# 2ನೇ ತರಗತಿ 12 ನೇ ಮೈಲಿಗಲ್ಲು

## 12.ಚಿತ್ರವನ್ನು ಹೆಸರಿಸು 137

ಗಡ್ಡ, ಮಚ್ಚು, ಲಡ್ಡು ಕುಚ್ಚು






## 12.ಒತ್ತಕ್ಷರ ಗುರುತಿಸಿ ಬರೆ 138

ಸೂಚನೆ: "ಚ" ಮತ್ತು "ಡ" ಅಕ್ಷರಗಳ ಒತ್ತಕ್ಷರಗಳು ಮೂಲಾಕ್ಷರಗಳನ್ನು ಹೋಲುತ್ತಿದ್ದು, ತಲೆಕಟ್ಟುರಹಿತವಾದ ಒತ್ತಕ್ಷರಗಳು ಎಂದು ಹೇಳಿಕೊಡುವುದು.

*ಅಕ್ಷರದ ತಳಭಾಗದ ಬಲಬದಿಯಲ್ಲಿ ಮೂಲಾಕ್ಷರಕ್ಕಿಂತ ಚಿಕ್ಕ ಅಳತೆಯಲ್ಲಿ ಬರೆಯಬೇಕೆಂದು ಹೇಳಿಕೊಡುತ್ತಾ ಬರೆಯುವುದನ್ನು ಅಭ್ಯಾಸ ಮೂಡಿಸುವುದು.




* ಹೆಚ್ಚು, ಕೆಚ್ಚು, ಚುಚ್ಚು, ಮಚ್ಚೆ, ರಚ್ಚೆ, ಹೆಚ್ಚಳ, ಹೂವಿನ ಕುಚ್ಚು.
* ಅಡ್ಡ, ಗಡ್ಡ, ಅಡ್ಡೆ, ಗುಡ್ಡೆ, ಗೆಡ್ಡೆ, ದುಡ್ಡು, ಕಡ್ಡಿ, ಕಡ್ಡಾಯ.

## 12.ಚಿತ್ರಪದ ಮತ್ತು ಸಾಧನಾ ಪದಗಳು 140

| | | | |
|---|---|---|---|
| ಗಡ್ಡ | ಹೆಚ್ಚು | ಮೆಚ್ಚು | ಮುಚ್ಚಾಲೆ |
| ಲಡ್ಡು | ಪಚ್ಚೆ | ನುಚ್ಚು | ಪಶ್ಚಿಮ |
| ಮಚ್ಚು | ದುಡ್ಡು | ಕುಚ್ಚು | ಕಡ್ಡಾಯ |
| ಜಡೆಕುಚ್ಚು | ಅಚ್ಚು | ಅಡ್ಡ | ಕಲಗಚ್ಚು |
| ಲಚ್ಚಿ | ಬಡ್ಡಿ | ಖೆಡ್ಡ | ಅಚ್ಚುಮೆಚ್ಚು |
| ಸಚ್ಚಿ | ಕಚ್ಚು | ಗಿಡ್ಡ | ಗುಡ್ಡಗಾಡು |
| ದೊಡ್ಡ | ಬಿಚ್ಚು | ದೊಡ್ಡಣ್ಣ | ಗೆಡ್ಡೆಗೆಣಸು |

## 12.ಅಭ್ಯಾಸ ಪುಸ್ತಕ (ವೃತ್ತದಲ್ಲಿರುವ ಒತ್ತಕ್ಷರವನ್ನು ಬಳಸಿ ಪದ ರಚಿಸು) 141

ಸೂಚನೆ: ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 141 ನ್ನು ಪೂರ್ಣಗೊಳಿಸುವುದು

## 12. ಚಿತ್ರ ಸಹಿತ ವಾಕ್ಯ 142



ಕಣ್ಣು ಮುಚ್ಚಾಲೆ ಆಡ ಬಲುಮೆಚ್ಚು
ಜಡೆ ಕುಚ್ಚು ನನಗೆ ಅಚ್ಚು ಮೆಚ್ಚು



ಅಚ್ಚು ಮೆಚ್ಚಿನ ನಾಯಿಮರಿ
ಕಚ್ಚಬೇಡ ಜಾಣಮರಿ



ಗಡ್ಡ ಎಳೆದವನಿಗೆ ಮಿಠಾಯಿ.
ದೊಡ್ಡವರ ಮಾತು ಕೇಳಬೇಕು.



ಮೈಸೂರು ಮಹಾರಾಜರ ಒಡ್ಡೋಲಗ
ದೊಡ್ಡ ಮನೆಯ ದೊಡ್ಡಣ್ಣ ಲಡ್ಡು ಊಟ ಹಾಕಣ್ಣ

ಸೂಚನೆ: ಈ ವಾಕ್ಯಗಳನ್ನು ಕಲಿತು ನೋಟ್ ಪುಸ್ತಕದಲ್ಲಿ ಬರೆಯಿರಿ

## 12.ಅಭ್ಯಾಸ ಪುಸ್ತಕ (ವಾಕ್ಯ ನೋಡಿ ಬರೆ) 143

ಸೂಚನೆ: ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 143 ನ್ನು ಪೂರ್ಣಗೊಳಿಸುವುದು

## 12.ಓದಿ-ಉತ್ತರಿಸು 144

ಸೂಚನೆ:

*ನೀಡಿರುವ ಪಠ್ಯಾಂಶವನ್ನು ನಿರರ್ಗಳವಾಗಿ ಓದಿ, ನೋಟ್ ಪುಸ್ತಕದಲ್ಲಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಸುವುದು.

### ಆಗುಂಬೆ

ಲಚ್ಚಿ ಹಾಗೂ ಸಚ್ಚಿ ಗೆಳೆಯರು. ಲಚ್ಚಿ, ಲಚ್ಚಿಯ ತಾಯಿ ಹಾಗೂ ಸಚ್ಚಿ, ಸಚ್ಚಿಯ ತಾಯಿ ಆಗುಂಬೆ ನೋಡಲು ಹೊರಟರು. ದಾರಿಯ ನಡುವೆ ದೊಡ್ಡ ದೊಡ್ಡ ಮರಗಳ ನೋಡಿದರು. ಹಚ್ಚ ಹಸುರಿನ ಕಾಡು ನೋಡಲು ದೂರದ ಊರುಗಳಿಂದ ಹೆಚ್ಚು ಜನ ಆಗಮಿಸಿದರು. ಬಂದ ಜನರು ಆಗುಂಬೆಯ ಸುಂದರ ನೋಟ ಸವಿದರು. ಊಟಕ್ಕೆ ಹೊರಟರು. ಕಾಡ ನಡುವೆ ಹರಿಯುವ ಝರಿಯ ನೀರನು ಕಂಡರು. ಊರಿನಿಂದ ತಂದ ಲಡ್ಡುಗಳನು ಹಂಚಿ ತಿಂದರು. ಮಕ್ಕಳು ಕಣ್ಣಾಮುಚ್ಚಾಲೆ ಆಟ ಆಡಿದರು. ಬಿದಿರು ಕಡ್ಡಿ ಮುರಿದು ಆಟಿಕೆ ತಯಾರಿಸಿ ಹಿರಿಯರಿಗೆ ಅಚ್ಚುಮೆಚ್ಚಿನ ಮಕ್ಕಳಾದರು. ಆಗ ಸಂಜೆಯಾಯಿತು. ರವಿ ಪಶ್ಚಿಮ ದಿಕ್ಕಿನ ಕಡೆ ಇಳಿಯತೊಡಗಿದನು. ಆ ನೋಟ ಬಲು ಸುಂದರ. ಜನರು ಹೆಚ್ಚು ಹೆಚ್ಚು ಸೇರಿದರು. ಆ ನೋಟ ಸವಿದರು. ಲಚ್ಚಿ, ಸಚ್ಚಿ ದುಡ್ಡು ಕೊಟ್ಟು ತಿನಿಸು ತಿಂದರು. ಊರ ಕಡೆ ಹೊರಟರು.

ಉತ್ತರಿಸಿ:

1. ಲಚ್ಚಿ ಹಾಗೂ ಸಚ್ಚಿ ದಾರಿಯ ನಡುವೆ ಏನು ನೋಡಿದರು?

ಉತ್ತರ: ______________________________

2. ಮಕ್ಕಳು ಯಾವುದರಿಂದ ಆಟಿಕೆ ತಯಾರಿಸಿದರು?

ಉತ್ತರ: ______________________________

## 12.ಅಭ್ಯಾಸ ಪುಸ್ತಕ (ಪದಬಂಧ) 145

ಸೂಚನೆ: ಅಭ್ಯಾಸ ಪುಸ್ತಕದಲ್ಲಿ ಮೆಟ್ಟಿಲು ಸಂಖ್ಯೆ 145 ನ್ನು ಪೂರ್ಣಗೊಳಿಸುವುದು

# 12. ಬಚ್ಚಾಪುರದ ದೊಡ್ಡ ಪಂಡಿತ (ವಾಚಕ) 146

ಕೃಷ್ಣದೇವರಾಯ ವಿಜಯನಗರದ ರಾಜ. ಅವನ ರಾಜಸಭೆಯಲಿ ಹೆಸರುವಾಸಿಯಾದ ಪಂಡಿತರೆಂದರೆ ತೆನಾಲಿ ರಾಮಕೃಷ್ಣ. ತೆನಾಲಿ ರಾಮನ ಕಂಡರೆ ರಾಜನಿಗೆ ತುಂಬಾ ಅಚ್ಚುಮೆಚ್ಚು. ಇದು ಇತರೆ ಪಂಡಿತರಿಗೆ ಬೇಸರ ತಂದಿತು.

ಬಚ್ಚಾಪುರದ ದೊಡ್ಡಣ್ಣ ಒಬ್ಬ ದೊಡ್ಡ ಪಂಡಿತ. ಅವನು ಒಂದೊಂದು ಊರಿಗೂ ಹೋಗಿ ಆ ಊರಿನ ಪಂಡಿತರನು ಸೋಲಿಸಿ ಬಿರುದುಗಳನು ಪಡೆದಿರುವನು. ಹಾಗೆಯೇ ಒಂದು ದಿನ ವಿಜಯನಗರದ ರಾಜಸಭೆಗೂ ಬಂದನು.

ದೊಡ್ಡಣ್ಣ ಪಂಡಿತ ಸಭೆಗೆ ಒಂದು ಸವಾಲು ಹಾಕಿದನು. ಒಂದು ಕಬ್ಬಿನ ತುಂಡು ತಂದು ಅವರ ಎದುರಿಗೆ ಇಟ್ಟನು. " ಈ ಕಬ್ಬು ಮುರಿಯದೇ ಚಿಕ್ಕದು ಮಾಡಬೇಕು. ಮಾಡಿದವರಿಗೆ ನಾನು ಪಡೆದ ಬಿರುದುಗಳನು ಕೊಡುವೆನು" ಎಂದು ಹೇಳಿದನು.

ಮುರಿಯದೇ ಈ ಕಬ್ಬು ಹೇಗೆ ಚಿಕ್ಕದು ಮಾಡುವುದು? ಎಂದು ಬೇರೆ ಪಂಡಿತರು ಚಿಂತಿತರಾದರು. ಆಗ ದೊಡ್ಡಣ್ಣ ಪಂಡಿತ ಜಂಬದಿಂದ ನಗ ತೊಡಗಿದನು.

ರಾಜನಿಗೆ ಬೇಸರವಾಯಿತು. ಆಗ ತೆನಾಲಿ ಈ ಸವಾಲು ಸ್ವೀಕರಿಸಿದನು. ಆ ಕಬ್ಬಿನ ತುಂಡಿನ ಪಕ್ಕ ಅದಕ್ಕಿಂತಲೂ ದೊಡ್ಡದಾದ ಬೇರೆ ಒಂದು ಕಬ್ಬಿನ ತುಂಡು ತಂದು ಇಟ್ಟನು. ಆಗ ದೊಡ್ಡಣ್ಣನ ಕಬ್ಬಿನ ತುಂಡು ಮುರಿಯದೇ ಚಿಕ್ಕದಾಯಿತು. ದೊಡ್ಡಣ್ಣ ಪಂಡಿತ ಸೋಲು ಒಪ್ಪಿಕೊಂಡ. ತಾನು ಪಡೆದ ಬಿರುದುಗಳನು ತೆನಾಲಿಗೆ ಕೊಡಲು ಹೋದ. " ಈ ಬಿರುದುಗಳು ನನಗೆ ಬೇಡ", ಎಂದನು ತೆನಾಲಿರಾಮ. ಸಂತಸದಿಂದ ರಾಜನು ಸಭೆಯ ಜನರಿಗೆ ಲಡ್ಡು ಹಂಚಿದನು.

| |
|---|
| ಸೂಚನೆ: ಮೇಲಿನ ವಾಚಕವನ್ನು ಓದಲು ಕಲಿತ ನಂತರ ನೋಟ್ ಪುಸ್ತಕದಲ್ಲಿ ಅಂದವಾಗಿ ಬರೆಯುವುದು. |